# ಸಗೋತ್ರವೆಂಬ ಭೂತ

ಭಾರತೀಯ ಭೂತಕಾಲದ ಪರಿಕಲ್ಪನೆಯಾದ 'ಸಗೋತ್ರ'ವೆಂಬುದು ಇಂದು ಮತ್ತೆ ಚರ್ಚಿತವಾಗುತ್ತಿದೆ. ಉತ್ತರದ ಕೆಲವು ರಾಜ್ಯಗಳಲ್ಲಿ ಪ್ರಬಲವಾಗುತ್ತಿರುವ ಖಾಪ್ ಪಂಚಾಯತಿಗಳು (ಜಾತಿ ಪಂಚಾಯ್ತಿಗಳು) ಸಗೋತ್ರವೆಂಬ ಮಂತ್ರವನ್ನಿಡಿದು ಮಾನವ ಹಕ್ಕುಗಳ ಮೇಲೆ ದೌರ್ಜನ್ಯವೆಸಗುತ್ತಿವೆ. ಸಗೋತ್ರವೆಂಬುದು ವರ್ತಮಾನಕ್ಕೂ ಸಲ್ಲುವ ಶ್ರೇಷ್ಠ ಅನುಕರಣಯೋಗ್ಯ ಮೌಲ್ಯವೆಂದು ಬಗೆದು ಸಗೋತ್ರ ವಿವಾಹವಾದವರನ್ನು ಕಾನೂನು ಬಾಹಿರವಾಗಿ ಹತ್ಯೆ ಮಾಡುವ ಹೇಯ ಕೆಲಸಕ್ಕೆ ಈ ಪಂಚಾಯ್ತಿಗಳು ಕೈಹಾಕಿವೆ. ಸಗೋತ್ರದವರು ಒಂದೇ ರಕ್ತಮೂಲದಿಂದ ಬಂದವರು, ಅವರ ನಡುವೆ ರಕ್ತ ಸಂಬಂಧ ಸಲ್ಲದೆಂಬುದು ಸಂಪ್ರದಾಯವಾದಿಗಳ ವಾದ. ಅದು ಧರ್ಮಬಾಹಿರ; ಅದನ್ನು ಮೀರಿದವರಿಗೆ ಉಗ್ರ ಶಿಕ್ಷೆ ನೀಡುವುದರಿಂದ ಸಮಾಜದಲ್ಲಿ ಹೆದರಿಕೆ, ಎಚ್ಚರಿಕೆ ಮೂಡುತ್ತದೆ ಎಂಬುದು ಅವರ ನಂಬಿಕೆ. ಈ ವಾದವನ್ನು ವೈಜ್ಞಾನಿಕವೆಂದು ಕರೆದು ಆಧುನಿಕ ಜೈವಿಕ ಶಾಸ್ತ್ರದ ಹಿನ್ನಲೆಯಲ್ಲಿ ಸಮರ್ಥಿಸಿಕೊಳ್ಳುವವರಿಗೇನೂ ಕೊರತೆಯಿಲ್ಲ.

ಸಗೋತ್ರದವರೆಂದರೆ ಒಂದೇ ರಕ್ತ ಮೂಲದಿಂದ ಬಂದವರೆಂದು ತಿಳಿಯುವುದೇ ಮೊದಲ ತಪ್ಪು. ವೇದಕಾಲದಲ್ಲಿ 'ಸಗೋತ್ರ'ವೆಂದರೆ 'ಒಂದೇ ಆವರಣದಲ್ಲಿರುವ ಗೋವುಗಳ ಸಮೂಹ' ಎಂಬ ಅರ್ಥದಲ್ಲಿ ಬಳಕೆಯಾಗಿರುವುದು ಕಂಡುಬರುತ್ತದೆ. ಅಂದರೆ 'ದನಗಳ ದೊಡ್ಡಿ' ಎಂದು ತಿಳಿಯಬೇಕು. ಆ ಕಾಲದಲ್ಲಿ ಸಂಪತ್ತನ್ನು ಗೋವುಗಳ ಆಧಾರದ ಮೇಲೆ ಅಳೆಯಲಾಗುತ್ತಿದ್ದುದರಿಂದ, ಅವುಗಳ ಜೋಪಾನ ಮಾಡುವುದು ಅತಿ ಮುಖ್ಯವಾಗಿತ್ತು. ಊರಿನ ಮುಖ್ಯಸ್ಥನು ಅಥವಾ ಋಷಿಯು ದೊಡ್ಡ ದನಗಳ ದೊಡ್ಡಿಯನ್ನು ಹೊಂದಿರುತ್ತಿದ್ದನು. ಅದರಲ್ಲಿ ಅವನ ಮತ್ತು ಊರಿನ ಎಲ್ಲರ ದನಗಳನ್ನು ಕೂಡಿಹಾಕಲಾಗುತ್ತಿತ್ತು. ಅವುಗಳನ್ನು ಗುರುತಿಸಲು ಅವುಗಳ ಕಿವಿಗಳ ಮೇಲೆ ಮುದ್ರೆಯನ್ನು ಹಾಕಲಾಗುತ್ತಿತ್ತು. ಆ ಗೋವುಗಳನ್ನು ಆ ಗೋತ್ರದ ಹೆಸರಿನಿಂದ ಅಥವಾ ಮುಖ್ಯಸ್ಥನ ಹೆಸರಿನಿಂದ ಕರೆಯಲಾಗುತ್ತಿತ್ತು. ಅನಂತರ ದಿನಗಳಲ್ಲಿ ಇದು ಜನರಿಗೂ ಅನ್ವಯವಾಗಿ ಆ ಗೋತ್ರದ ಹೆಸರಿನಿಂದಲೇ ಗುರುತಿಸಲಾಗುತ್ತಿತ್ತು. ಅಂದ ಮೇಲೆ ಇಲ್ಲಿ ರಕ್ತ ಮೂಲದ ಪ್ರಶ್ನೆ ಉದ್ಭವವಾಗುವುದೇ ಇಲ್ಲ. ಸಗೋತ್ರವೆಂದರೆ 'ದನಗಳ ದೊಡ್ಡಿ'ಯೆಂಬ ಅಭಿಪ್ರಾಯವನ್ನು ಪಿ.ವಿ. ಕಾಣೆ, ವಿ.ಎಸ್. ಅಗರ್‌ವಾಲರಂಥ ವಿದ್ವಾಂಸರು ಸಮರ್ಥಿಸುತ್ತಾರೆ.

ಗೋತ್ರದ ಕಲ್ಪನೆಯನ್ನು ರಕ್ತಮೂಲ ಸಂಬಂಧಕ್ಕೆ ತಳಕು ಹಾಕಿ, ವಿವಾಹ ಬಂಧನಕ್ಕೆ ನಿಷೇಧ ಹೇರಲಾರಂಭಿಸಿದ್ದು ಸುಮಾರು ಎರಡೂವರೆ ಸಾವಿರ ವರ್ಷಗಳಿಂದೀಚೆಗೆ ಎಂದು ಗುರುತಿಸಬಹುದು. ಸಾಮಾನ್ಯವಾಗಿ ಇಂದು ಮತ್ತು ಹಿಂದೆ ಈ ಗೋತ್ರದ ಮೂಲಕ ಗುರುತಿಸುವಿಕೆ ಮತ್ತು ಅದರ ಪರಿಪಾಲನೆ ಬ್ರಾಹ್ಮಣ ಕುಲಗಳಲ್ಲಿ ಮಾತ್ರ ಕಂಡುಬರುತ್ತದೆ. ಕ್ಷತ್ರಿಯ ಮೂಲದವರು, ಮತ್ತಿತರರು ಗೋತ್ರದ ಮೂಲಕ ಗುರುತಿಸಿಕೊಂಡರೆ, ಅದು ಕೇವಲ ಅನುಕರಣೆಯ ಪ್ರವೃತ್ತಿ ಎಂದು ತಿಳಿಯಬೇಕಾಗುತ್ತದೆ. ವಂಶವೃಕ್ಷಗಳ ಮೂಲಕ ಗುರುತಿಸಬಹುದಾದಂಥ ಚಾರಿತ್ರಿಕ ಆಧಾರಗಳ ಮೇಲೆ ಮಾತ್ರ ರಕ್ತಮೂಲವನ್ನು ನಂಬಬಹುದು. ಅಂಥವರಲ್ಲಿ ಕೊಟ್ಟು ತರುವಂತಹ ಪದ್ಧತಿಯನ್ನು ನಿಷೇಧಿಸಬಹುದು. ಇಂಥ ನಿಷೇಧಕ್ಕೆ ವೈಜ್ಞಾನಿಕವಾದ ಸಕಾರಣಗಳನ್ನೂ ನೀಡಬಹುದು.

ಭಾರತದಲ್ಲಿ ಜಾತಿ ಜಾತಿಗಳ ನಡುವೆ, ಮತ ಮತಗಳ ನಡುವೆ ಸಂಕರವಾಗಿರುವುದು ಸುಳ್ಳಲ್ಲ. ಅದರ ಜೊತೆಗೆ ಸಾವಿರಾರು ವರ್ಷಗಳಲ್ಲಿ ಬ್ರಾಹ್ಮಣರಂಥ ವಲಸಿಗರು ಊರು ದೇಶಗಳನ್ನು ಬಿಟ್ಟು ಮತ್ತೊಂದು ನೆಲೆಗೆ ವಲಸೆ ಹೋಗುತ್ತಿದ್ದುದು; ಆ ಕಾರಣದಿಂದ ಅನಿವಾರ್ಯವಾಗಿ ಸ್ಥಳೀಯ ಸಂಸ್ಕೃತಿಗೆ/ ವಾತಾವರಣಕ್ಕೆ ತಮ್ಮನ್ನು, ತಮ್ಮ ನಂಬಿಕೆಗಳನ್ನು ಒಗ್ಗಿಸಿಕೊಳ್ಳಬೇಕಾಗಿದ್ದುದು ಅನಿವಾರ್ಯವಾಗಿತ್ತು. ಆಗ ಸ್ಥಳೀಯ ಬ್ರಾಹ್ಮಣ ಜನಾಂಗ-ಜಾತಿಗಳ ನಡುವೆ ಕೊಟ್ಟು ತೆಗೆದುಕೊಳ್ಳುವುದು ಸಹಜವಾಗಿರುತ್ತಿತ್ತು. ಇಂಥ ಸಂದರ್ಭದಲ್ಲಿ ರಕ್ತಸಂಕರ ಧಾರಾಳವಾಗಿ ನಡೆದು ಹೋಗುತ್ತಿತ್ತು. ಆಗ ರಕ್ತದ 'ಮಡಿ' ಎಲ್ಲಿ ತಾನೆ ಉಳಿದುಕೊಳ್ಳುತ್ತಿತ್ತು? ಸಾವಿರಾರು ವರ್ಷಗಳ ಈ ರೀತಿಯ ಸಂಕರದಿಂದಾಗಿ ಗೋತ್ರದ ಮೂಲ ಸ್ವರೂಪವೇ ಪಲ್ಲಟವಾಗಿರುವ ಸಾಧ್ಯತೆಯಾಗಿದೆ. ಅಂದ ಮೇಲೆ ಸಗೋತ್ರ ಪ್ರೇಮವನ್ನಾಗಲೀ ಅದು ಅತ್ಯಂತ ಪವಿತ್ರವೆಂದಾಗಲೀ ವಾದಿಸುವುದು ಅತಾರ್ಕಿಕವಾಗುತ್ತದೆ.

ಹಾಗೆ ನೋಡಿದರೆ ಇಡೀ ಮಾನವಕುಲವೇ ಎರಡು ಮೂರು ಮೂಲ ನೆಲೆಗಳಿಂದ ಉದ್ಭವವಾಗಿದೆಯೆಂದು ಮಾನವಶಾಸ್ತ್ರಜ್ಞರು ಅಭಿಪ್ರಾಯಪಡುತ್ತಾರೆ. ಧರ್ಮಶಾಸ್ತ್ರಗಳು ಪುರಾಣಗಳು ಏಕಮೂಲ ನೆಲೆಯನ್ನೇ ಸಮರ್ಥಿಸುತ್ತವೆ. ಆಡಂ ಮತ್ತು ಈವ್‌ರಿಂದ ಮಾನವ ಕುಲ ಉದ್ಭವವಾಯಿತೆಂದು ಬೈಬಲ್ ಹೇಳುವಂತೆ ಎಲ್ಲ ಧರ್ಮಗಳು ಮಾನವ ಸಂತತಿಯ ಸೃಷ್ಟಿ ಮೂಲದ ಬಗ್ಗೆ ಹೇಳುತ್ತವೆ. ಅಂದ ಮೇಲೆ ಸಗೋತ್ರ ಪರಿಕಲ್ಪನೆಯನ್ನು ವಂಶವಾಹಿ ಮೂಲದ ಜೊತೆ ಸಮೀಕರಿಸುವುದು ಅಸಮಂಜಸವಾಗುತ್ತದೆ. ಈ ಪರಿಕಲ್ಪನೆಯ ಆಧಾರದ ಮೇಲೆ ನೋಡಿದರೆ ಮಾನವರೆಲ್ಲರೂ ಒಂದೇ ತಾಯಿ-ತಂದೆಯರ ಮಕ್ಕಳೇ! ಒಂದೇ ರಕ್ತವೆಂದು ಬಗೆದು ಮದುವೆಯಾಗದೆ ಉಳಿದುಬಿಟ್ಟದ್ದರೆ ಮಾನವ ಸಂತತಿಯೇ ಬೆಳೆಯುತ್ತಿರಲಿಲ್ಲ! ನಾಗರಿಕತೆ-ಸಂಸ್ಕೃತಿಗಳು ಅರಳುತ್ತಿರಲಿಲ್ಲ! ಜ್ಞಾನ-ವಿಜ್ಞಾನ-ತಂತ್ರಜ್ಞಾನಗಳು ಬೆಳಗುತ್ತಿರಲಿಲ್ಲ! 'ಮರ್ಯಾದೆ'ಯ ಹೆಸರಿನಲ್ಲಿ ಇಂದು ನಡೆಯುತ್ತಿರುವ ಅಮಾನವೀಯ ಹತ್ಯೆಗಳಿಗೆ ಮಾನವತೆಯ ಒಮ್ಮತದ ಉತ್ತರ ನೀಡಬೇಕಾಗಿದೆ.

■ ಶಿಕಾಕು

# ಮಾತೇ ಮುತ್ತು

* ಯಾರಿಗೆ ಏನೂ ತಿಳಿಯದೋ ಹಾಗೂ ಏನೂ ತಿಳಿಯದೆಂದು ತಿಳಿದಿದೆಯೋ ಅವರು ದಡ್ಡರು. ಯಾರಿಗೆ ಏನೂ ತಿಳಿಯದೋ, ತಮಗೆ ಏನೂ ತಿಳಿಯದೆಂದು ತಿಳಿದಿಲ್ಲವೋ ಅವರು ಸಾಮಾನ್ಯರು- ತಿಳಿಸಿದಾಗ ತಿಳಿಯಬಲ್ಲರು. ಯಾರಿಗೆ ತಿಳಿದಿದೆಯೋ, ತಿಳಿದಿದೆ ಎಂಬುದೂ ತಿಳಿದಿದೆಯೋ ಅವರು ವಿವೇಕಿಗಳು.

-ಅರಬ್ ಗಾದೆ

★ ತೆರಿಗೆಗಳ ಭಾರದಿಂದ ನರಳುವ ಜನ ವೀರರಾಗಲಾರರು.

-ಫ್ರಾನ್ಸಿಸ್ ಬೇಕನ್

★ ನಿಮಗಿಂತ ದೊಡ್ಡ ಸ್ಥಾನಕ್ಕೆ ಏರಿದವರನ್ನು, ಪ್ರತಿಭಾವಂತರನ್ನು ನೋಡಿ ಕರುಬಬೇಡಿ. ಅದು ನಿಮ್ಮ ಸಂತಸವನ್ನು ಹಣಿದುಬಿಡುತ್ತದೆ.

-ಖುಷವಂತ್‌ಸಿಂಗ್

★ ನೀರಾವರಿ, ಉದ್ದಿಮೆ ಒಂದು ನಾಡಿನ ಪ್ರಗತಿಗೆ ಅಡಿಗಲ್ಲು. ನೀರಾವರಿಯಂತಹ ಅಭಿವೃದ್ಧಿ ಕಾರ್ಯಗಳು ಕೆಲವರಿಗೆ ಮಾತ್ರ ಅನುಕೂಲ ಎಂಬ ಆತಂಕ ದಲಿತರಿಗೆ ಬೇಕಿಲ್ಲ.

-ಬಿ.ಆರ್.ಅಂಬೇಡ್ಕರ್

★ ತಾಯಿ ಉಚಿತವಾಗಿ ಮಾಡುವುದನ್ನು ಎಷ್ಟೋ ಹಣ ಕೊಟ್ಟರೂ, ಯಾರೂ ಮಾಡಲಾರರು.

-ರಷ್ಯಾ ಗಾದೆ

★ ಒಬ್ಬನು ಯಾವ ವಸ್ತುಗಳನ್ನು ತೊರೆಯುತ್ತಾನೋ, ಆ ವಸ್ತುಗಳಿಂದ ಉಂಟಾಗುವ ದುಃಖಗಳಿಲ್ಲದವನಾಗುತ್ತಾನೆ.

-ತಿರುವಳ್ಳುವರ್

★ ತಾಳಿದವರೆ ಗೆಲುವರು, ಆಳಗಳಿಗೆ ಇಳಿವರು.

-ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟ

★ ತ್ಯಾಗಿಗಳೆಂದು ತೋರಿಸಿಕೊಳ್ಳುವುದು ನಮ್ಮ ದೇಶದಲ್ಲಿ ಲಾಭದಾಯಕ ಹುದ್ದೆಯಾಗಿದೆ.

-ಎಂ.ಗೋಪಾಲಕೃಷ್ಣ ಅಡಿಗ

★ ತಾಳಿ ತಾಳಿ ಎನ್ನುವುದೇ ಮಂತ್ರ, ತಾಳ್ಮೆಯಿಲ್ಲದಿರೆ ಬಾಳೆ ಅತಂತ್ರ.

-ಪು.ತಿ.ನರಸಿಂಹಾಚಾರ್

★ ತಾಳ್ಮೆ ಕಹಿ, ಆದರೂ ಅದರ ಫಲ ಸಿಹಿ.

-ರೂಸೋ

★ ನೆಂಟರಿಗೆ ಸಾಲವನು ಕೊಡುವಾತ ಮೂರ್ಖ, ಗಂಟನೊಬ್ಬರ ಕೈಯಲ್ಲಿ ಇಡುವಾತನೆ ಮೂರ್ಖ.

-ಪುರಂದರದಾಸ

★ ತನ್ನ ದಡ್ಡತನ ಕಂಡುಕೊಂಡವನು ಬುದ್ಧಿವಂತ ನಾಗುವ ಹಾದಿಯಲ್ಲಿ ಮುಂದೆ ಹೋದಂತೆಯೇ.

-ಸ್ಪೇನ್ ಗಾದೆ